ದಿನಾಂಕ : 09-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

10. ನನ್ನ ಗಂಡ ತೀರಿಕೊಂಡ ಹಿಂದಿನ ದಿನ ಅಂದರೆ ದಿಃ 02-03-2020 ರಂದು ನನ್ನ ಮನೆಗೆ ಸಂಜೆ 06:00 ಗಂಟೆಗೆ ಮೋಟಾರ ಸೈಕಲ ತೆಗೆದುಕೊಂಡು ಬಂದಿದ್ದನು. ಅದೇ ದಿನ ರಾತ್ರಿ ನಮ್ಮ ಮನೆಯಲ್ಲಿ ತಿಂಡಿ ತಿಂದು ರಾತ್ರಿ 08:00 ಗಂಟೆಗೆ ಮೋಟಾರ ಸೈಕಲ ತೆಗೆದುಕೊಂಡು ಹೊರಟನು. ಆ ರೀತಿ ಹೊರಟ 03 ಗಂಟೆಯಿಂದ 04 ಗಂಟೆ ಒಳಗೆ ಮೋಟಾರ ಸೈಕಲ ಮೇಲಿಂದ ಬಿದ್ದು ತೀರಿಕೊಂಡಿದ್ದಾನೆ ಎನ್ನುವ ವಿಚಾರ ನನಗೆ ಗೊತ್ತಾಗಿತ್ತು ಎನ್ನುವುದು ಸರಿಯಲ್ಲ.

11. ನನ್ನ ಗಂಡ ಯಾವ ರೀತಿ ತೀರಿಕೊಂಡಿದ್ದಾನೆ ಎಂದು ನನಗೆ ಗೊತ್ತಿರಲಿಲ್ಲ, ಮರು ದಿನ ನನ್ನ ಮನೆಯವರು ನನ್ನನ್ನು ಕಿತ್ತೂರ ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿ ಸುಳ್ಳು ದೂರನ್ನು ಬರೆಯಿಸಿಕೊಂಡಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ.

12. ಆರೋಪಿತರ ಮನೆಯ ಹಿಂಭಾಗ ನನ್ನ ಗಂಡನ ಕೊಲೆ ಆಗಿದೆ ಎಂದು ಚಾಸಾಃ14 ಮಂಜುನಾಥ ದೊಡಮನಿ ರವರು ನನಗೆ ತಿಳಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನ ಎನ್ನುವುದು ಸರಿಯಲ್ಲ.

13. ದಿಃ 04.03.2020 ರಂದು ನನ್ನನ್ನು ಕಿತ್ತೂರಿನಲ್ಲಿರುವ ಸಿ.ಪಿ.ಐ ಕಚೇರಿಗೆ ಕರೆಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಲ್ಲಿ ನಾನು ನನ್ನ ಗಂಡ ಬಸವರಾಜರವರು, 2ನೇ ಆರೋಪಿ ಮಹಾಂತೇಶ ಪಾಗದ ಮತ್ತು ಗೋಪಾಲ ಪಾಗಾದರವರ ಹೆಂಡತಿಯರೊಂದಿಗೆ ಅಸಭ್ಯವಾಗಿ ವರ್ತಿಸಿ ತಂಟೆ ಮಾಡಿದ್ದರಿಂದ, 2ನೇ

ಆರೋಪಿ ಮಹಾಂತೇಶ ಮತ್ತು 3 ನೇ ಆರೋಪಿ ರೇಣುಕಾರವರು ಕೂಡಿ ನನ್ನ ಗಂಡನಿಗೆ ಕೊಲೆ ಮಾಡುವ ಸಂಚು ಮಾಡಿ ಫೋನ ಮಾಡಿ ಆರೋಪಿತರು ಇದ್ದ ಸ್ಥಳಕ್ಕೆ ಕರೆಸಿಕೊಂಡು ಕೊಲೆ ಮಾಡಿದ್ದಾರೆಂದು ನನಗೆ ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ವಿಚಾರವನ್ನು ನಾನು ಡಿ.ವೈ.ಎಸ್.ಪಿ ರವರ ಮುಂದೆ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

14. ನಾನು ನಿಪಿ–1 ದೂರಿನಲ್ಲಿ " ಬಸವರಾಜನಿಗೆ ಯಾರೊ ನಿನ್ನೆ ರಾತ್ರಿ ಬಡಿಗೆಯಿಂದ ಹೊಡೆದಿದದ್ದರಿಂದ ಕೈ ಕಾಲು ಮುರಿದು , ರಕ್ತ ಬಂದು ಪ್ರಜ್ಞೆ ತಪ್ಪಿತ್ತು " ಎಂದು ನಾನು ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ.

15. ನನ್ನ ಗಂಡ ಯಾವ ರೀತಿ ತೀರಿಕೊಂಡಿದ್ದಾನೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ಮತ್ತು ನಮ್ಮ ಮನೆಯವರು ಸೇರಿ ಆರೋಪಿತರ ಮೇಲಿನ ದ್ವೇಷದಿಂದ ಆರೋಪಿತರನ್ನು ಈ ಪ್ರಕರಣದಲ್ಲಿ ಸೇರಿಸಬೇಕು ಎನ್ನುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ಅಪಘಾತದಲ್ಲಿ ತೀರಿಕೊಂಡಿಲ್ಲ, ಅವನ ಕೊಲೆ ಮಾಡಲಾಗಿದೆ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.